# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 948**
**ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್**
**ದಿನಾಂಕ : 27.12.2022**
**ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನಗರಾಭಿವೃದ್ಧಿ ಇಲಾಖೆಯ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು; ಖಾಯಂ ನೌಕರರ ಸಂಖ್ಯೆ ಎಷ್ಟು; ಮಹಿಳಾ ಪೌರ ಕಾರ್ಮಿಕರ ಸಂಖ್ಯೆ ಎಷ್ಟು; ಮಹಿಳಾ ಪೌರಕಾರ್ಮಿಕರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ; ಕಳೆದ 3 ವರ್ಷಗಳಲ್ಲಿ ಎಷ್ಟು ಪೌರಕಾರ್ಮಿಕರನ್ನು ಖಾಯಂಗೊಳಿಸಲಾಗಿದೆ; | ನಗರಾಭಿವೃದ್ಧಿ ಇಲಾಖೆಯ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ – 9501<br>ಖಾಯಂ ನೌಕರರ ಸಂಖ್ಯೆ – 2231<br>ಮಹಿಳಾ ಪೌರ ಕಾರ್ಮಿಕರ ಸಂಖ್ಯೆ – 3970<br>ಕಳೆದ 3 ವರ್ಷಗಳಲ್ಲಿ ಖಾಯಂಗೊಳಿಸಲಾದ ಪೌರಕಾರ್ಮಿಕರ ಸಂಖ್ಯೆ – 501<br><br>ಮಹಿಳಾ ಪೌರಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳ ಕುರಿತು ಮಹಾನಗರಪಾಲಿಕೆ ವಾರು ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ಕಸ ವಿಲೇವಾರಿಗೆ ಎಷ್ಟು ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ; ಆ ಸಂಸ್ಥೆಗಳಲ್ಲಿರುವ ನೌಕರರ ಸಂಖ್ಯೆ ಎಷ್ಟು; ಕಸ ವಿಲೇವಾರಿಗೆ ಗುತ್ತಿಗೆ ಪಡೆದಿರುವ ಸಂಸ್ಥೆಗಳು ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ಲು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ನಕಲಿ ಪೌರ ಕಾರ್ಮಿಕರನ್ನು ಗುರುತಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ನಕಲಿ ಪೌರ ಕಾರ್ಮಿಕರ ಹೆಸರಿನಲ್ಲಿ ಬಿಲ್ಲು ಪಡೆಯುತ್ತಿರುವ ಸಂಸ್ಥೆಗಳನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ; | 6 ಮಹಾನಗರ ಪಾಲಿಕೆಗಳಲ್ಲಿ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಒಟ್ಟು 81 ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದ್ದು, ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ.<br><br>ನಕಲಿ ಪೌರ ಕಾರ್ಮಿಕರ ಹೆಸರಿನಲ್ಲಿ ಬಿಲ್ಲು ಪಡೆದಿರುವ ಕುರಿತು ಇಲ್ಲಿಯವರೆಗೆ ಯಾವುದೇ ಪ್ರಕರಣವು ದಾಖಲಾಗಿರುವುದಿಲ್ಲ. |
| ಇ) | ನಗರಾಭಿವೃದ್ಧಿ ಇಲಾಖೆಯ ನಗರಪಾಲಿಕೆ ವ್ಯಾಪ್ತಿಯ ಸಂಸ್ಥೆಗಳಲ್ಲಿರುವ ಪೌರಕಾರ್ಮಿಕರ ಜೀವನ ಮಟ್ಟ ಸುಧಾರಿಸಲು ಸರ್ಕಾರ ಕೈಗೊಂಡ ಯೋಜನೆಗಳೇನು ? (ವಿವರ ನೀಡುವುದು) | ರಾಜ್ಯದ ನಗರಸ್ಥಳೀಯ ಸಂಸ್ಥೆಗಳ (ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳು) ವ್ಯಾಪ್ತಿಯಲ್ಲಿ ಸಕ್ರಿಯವಾಗಿ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸುತ್ತಿರುವ ಖಾಯಂ/ಗುತ್ತಿಗೆ ಹಾಗೂ ನೇರಪಾವತಿಯ ಪೌರಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿಗಳ ಕಲ್ಯಾಣಕ್ಕೆ ಹೆಚ್ಚು ಒತ್ತು ನೀಡಿ, |

| | | |
|---|---|---|
| | | ಇವರ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಮತ್ತು ಆರೋಗ್ಯ ರಕ್ಷಣೆಯ ಹಿತದೃಷ್ಠಿಯಿಂದ ಸರ್ಕಾರವು ವಿವಿಧ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದು ವಿವರ ಈ ಕೆಳಕಂಡಂತಿದೆ:<br><br>1. ಪೌರಕಾರ್ಮಿಕರ ಹಾಗೂ ಸ್ವಚ್ಛತಾ ಸಿಬ್ಬಂದಿಗಳ ನಿಯಮಿತ ಆರೋಗ್ಯ ತಪಾಸಣೆ ಮಾಡಿಸುವ ಮತ್ತು ರೋಗ ಪ್ರತಿಬಂಧಕದ ಚುಚ್ಚುಮದ್ದು ನೀಡುವ ಕಾರ್ಯಕ್ರಮ ನಡೆಸಲಾಗುತ್ತಿದೆ.<br>2. ಪೌರಕಾರ್ಮಿಕರ ಹಾಗೂ ಸ್ವಚ್ಛತಾ ಸಿಬ್ಬಂದಿಗಳಿಗೆ ಸರ್ಕಾರದ ವಿಮಾ ಕಂಪನಿಗಳ ಅಪಘಾತ ವಿಮೆ ಹಾಗೂ ಆರೋಗ್ಯ ವಿಮೆ ಸೌಲಭ್ಯ ಒದಗಿಸಲಾಗುತ್ತಿದೆ.<br>3. ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಸಿಬ್ಬಂದಿಗಳಿಗೆ ಪ್ರತಿ ನಿತ್ಯ ಬೆಳಗಿನ ಉಪಹಾರ ನೀಡಲಾಗುತ್ತಿದೆ.<br>4. ಪೌರಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿಯಲ್ಲಿ ವಾಸ ಯೋಗ್ಯ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ.<br>5. ಶೇ.24.10 ಪರಿಶಿಷ್ಟ ಜಾತಿ/ಪಂಗಡ ಕಲ್ಯಾಣ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರಿಗೆ ಪ್ರಥಮ ಆದ್ಯತೆಯನ್ನು ನೀಡಿ ಆರೋಗ್ಯ, ಶಿಕ್ಷಣ, ಸ್ವಯಂ ಉದ್ಯೋಗ, ವಸತಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.<br>6. 2022-23ನೇ ಸಾಲಿನಿಂದ ಪ್ರತಿ ಪೌರಕಾರ್ಮಿಕರಿಗೆ ಮಾಸಿಕ ರೂ. 2000/-ಗಳ ಸಂಕಷ್ಟ ಭತ್ಯೆಯನ್ನು ನೀಡಲಾಗುತ್ತಿದೆ. |

**ಸಂಖ್ಯೆ: ನಅಇ 210 ಎಂಎನ್‌ಇ 2022 (ಇ)**

**(ಬಿ. ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ

## ರಾಜ್ಯದ ಮಹಾನಗರಪಾಲಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಪೌರಕಾರ್ಮಿಕರ ವಿವರ ಹಾಗೂ ಇತರೆ ವಿವರಗಳ ಬಗ್ಗೆ

| ಕ್ರ. ಸಂ | ಮಹಾನಗರ ಪಾಲಿಕೆ ಹೆಸರು | ಮಹಿಳಾ ಪೌರಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ | ಕಸ ವಿಲೇವಾರಿಗೆ ಎಷ್ಟು ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. | ಗುತ್ತಿಗೆ ಸಂಸ್ಥೆಯಡಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು | ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ ಪಡೆಯುತ್ತಿರುವುದು ಸಂಬಂಧಿಸಿದ ನ.ಸ್ಥ.ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗಳ ಗಮನಕ್ಕೆ ಬಂದಿದೆಯೇ | ಬಂದಿದಲ್ಲಿ ಅಂತಹ ಸಂಸ್ಥೆಗಳನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ |
|---|---|---|---|---|---|---|
| 1 | ತುಮಕೂರು | ವಿಶ್ರಾಂತಿ ಗೃಹ. ಸುರಕ್ಷಾ ಸಲಕರಣೆಗಳು. ಸಂಕಷ್ಟ ಭತ್ಯೆ. ಬೆಳಗಿನ ಉಪಾಹಾರ (ಮೊಟ್ಟೆ ಸೇರಿ). ಸಮವಸ್ತ್ರ. ಮಾಸ್ಟರ್ ಹೆಲ್ತ್ ಚೆಕ್‌ಅಪ್ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. | 1 | 320 | ಈ ಸಂಸ್ಥೆಯವರು ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಯಾವುದೇ ಬಿಲ್ಲು ತಯಾರಿಸುತ್ತಿರುವುದಿಲ್ಲ ಈ ರೀತಿಯ ಪ್ರಕರಣಗಳು ಯಾವುದು ಇರುವುದಿಲ್ಲ. | 0 |
| | ಒಟ್ಟು | | **1** | **320** | | |
| 2 | ಬಳ್ಳಾರಿ | ಒಟ್ಟು 3 ಸಿವಿಧ ಬ್ಯಾಬಿನ್ ಗಳನ್ನು ಅಳವಡಿಸಿ ಪೌರಕಾಂರ್ಮಿಕರಿಗೆ ವಿಶ್ರಾಂತಿ ಗೃಹ. ಕುಡಿಯುವ ನೀರು. ಶೌಚಾಲಯ. ವ್ಯವಸ್ಥೆ ಕಲ್ಪಿಸಲಾಗಿದೆ. ಅದೇ ರೀತಿ ಮಹಿಳಾ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ. ಇಪಿಎಫ್/ಇಎಸ್ ಐ. ಸಮವಸ್ತ್ರ ಸುರಕ್ಷಾ ಧಿರಸುಗಳು. ಗೃಹಭಾಗ್ಯ ಯೋಜನೆ.ಆರೋಗ್ಯವಿಮೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. | ಬಳ್ಳಾರಿ ಮಹಾನಗರ ಪಾಲಿಕೆಯಿಂದಲೇ ಕಸ ವಿಲೇವಾರಿಯನ್ನು ನಿರ್ವಹಿಸಲಾಗುತ್ತಿದೆ. | 0 | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| | ಒಟ್ಟು | | **0** | **0** | | |

| ಕ್ರ. ಸಂ | ಮಹಾನಗರ ಪಾಲಿಕೆ ಹೆಸರು | ಮಹಿಳಾ ಪೌರಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ | ಕಸ ವಿಲೇವಾರಿಗೆ ಎಷ್ಟು ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. | ಗುತ್ತಿಗೆ ಸಂಸ್ಥೆಯಡಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು | ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ ಪಡೆಯುತ್ತಿರುವುದು ಸಂಬಂಧಿಸಿದ ನ.ಸ್ಥ.ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗಳ ಗಮನಕ್ಕೆ ಬಂದಿದೆಯೇ | ಬಂದಿದಲ್ಲಿ ಅಂತಹ ಸಂಸ್ಥೆಗಳನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ |
|---|---|---|---|---|---|---|
| 3 | ಮಂಗಳೂರು | ಮಹಿಳಾ ಪೌರ ಕಾರ್ಮಿಕರಿಗೆ ಬೆಳಗಿನ ಉಪಹಾರ. ಹ್ಯಾಂಡ ಗ್ಲೋಸ್. ಗಮಬೂಟ್. ಮಾಸ್ಕ ಸಮವಸ್ತ್ರ. ಆರೋಗ್ಯ ವಿಮೆ ಹಾಗೂ ಪರಿಕರಗಳನ್ನು ನೀಡಲಾಗುತ್ತಿದೆ. ಖಾಯಂ ಮಹಿಳಾ ನೌಕರರಿಗೆ ಕೆಸಿಎಸ್‌ಆರ್ ನಿಯಮದಂತೆ ಹೆರಿಗೆ ರಜೆಯನ್ನು ಮಂಜೂರು ಮಾಡಲಾಗುತ್ತದೆ. ಹಾಗೂ ಎಲ್ಲಾ ಪೌರಕಾರ್ಮಿಕರಿಗೆ ವರ್ಷದಲ್ಲಿ 2 ಬಾರಿ ಆರೋಗ್ಯ ತಪಾಸಣೆ ಮಾಡಿಸಲಾಗುತ್ತದೆ. 21 ದಿನಗಳ ವಿಶೇಷ ವೇತನ ಸೌಲಭ್ಯ ಒದಗಿಸಲಾಗಿದೆ. ಪೌರೆ ಕಾರ್ಮಿಕರ ದಿನಾಚರಣೆ ನಿಮಿತ್ತ ಖಾಯಂ ಪೌರ ಕಾರ್ಮಿಕರಿಗೆ ರೂ 7000/- ಪ್ರೋತ್ಸಹಧನಗಳನ್ನು ನೀಡಲಾಗಿದೆ. ಅಕ್ಟೋಬರ್ 2022 ರಿಂದ ರೂ. 2000/- ಸಂಕಷ್ಟ ಭತ್ಯೆಯನ್ನು ವೇತನದಲ್ಲಿ ಸೇರ್ಪಡೆಗೊಳಿಸಿ ನೀಡಲಾಗುತ್ತಿದೆ. | 1 | 559 | ನಕಲಿ ಪೌರ ಕಾರ್ಮಿಕರ ಹೆಸರನಲ್ಲಿ ಬಿಲ್ಲು ಪಡೆದಿರುವ ಕುರಿತು ಯಾವುದೇ ಪ್ರಕರಣವು ಇಲ್ಲಿಯವರೆಗೆ ದಾಖಲಾಗಿರುವುದಿಲ್ಲ. | 0 |
| | ಒಟ್ಟು | | 1 | 559 | 0 | 0 |

| ಕ್ರ ಸಂ | ಮಹಾನಗರ ಪಾಲಿಕೆ ಹೆಸರು | ಮಹಿಳಾ ಪೌರಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ | ಕಸ ವಿಲೇವಾರಿಗೆ ಎಷ್ಟು ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. | ಗುತ್ತಿಗೆ ಸಂಸ್ಥೆಯಡಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು | ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ ಪಡೆಯುತ್ತಿರುವುದು ಸಂಬಂಧಿಸಿದ ನ.ಸ್ಥ.ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗಳ ಗಮನಕ್ಕೆ ಬಂದಿದೆಯೇ | ಬಂದಿದಲ್ಲಿ ಅಂತಹ ಸಂಸ್ಥೆಗಳನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ |
|---|---|---|---|---|---|---|
| 4 | ವಿಜಯಪುರ | ವಿಜಯಪುರ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಖಾಯಂ ಪೌರಕಾರ್ಮಿಕರುಗಳಿಗೆ ಸರ್ಕಾರಿಂದ ಬರುವ ಎಲ್ಲಾ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ನೇರವೇತನ ಪಾವತಿ ಪೌರಕಾರ್ಮಿಕರುಗಳಿಗೆ, ಸಮವಸ್ತ್ರ, ಸುರಕ್ಷತಾ ಸಲಕರಣೆಗಳು, ಬೆಳಗಿನ ಉಪಹಾರ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ | 2 | ಒಟ್ಟು 340 ಹೊರಗುತ್ತಿಗೆ ನೌಕರರು ಕಾರ್ಯ ನಿರ್ವಹಿಸುತ್ತಿರುತ್ತಾರೆ. | ಮಹಾನಗರಪಾಲಿಕೆ ವಿಜಯಪುರದಲ್ಲಿ ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ಲು ಪಡೆಯುತ್ತಿರುವುದು ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ. | ಸರ್ಕಾರದ ಮಟ್ಟದಲ್ಲಿ ಉತ್ತರಿಸಬಹುದಾಗಿರುತ್ತದೆ. |
| | ಒಟ್ಟು | | 3 | 340 | | 0 |
| 5 | ದಾವಣಗೆರೆ | ಕೆ.ಸಿ.ಎಸ್.ಆರ್ ನಿಯಮಾವಳಿಯನ್ವಯ ಅವಕಾಶವಿರುವ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. | 0 | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| | ಒಟ್ಟು | | 0 | 0 | 0 | 0 |
| 6 | ಧಾರವಾಡ | ಬೆಳಗಿನ ಉಪಹಾರ, ಹ್ಯಾಂಡ ಗ್ಲೋಸ್, ಗಮಬೂಟ್, ಮಾಸ್ಕ ಸಮವಸ್ತ್ರ, ಆರೋಗ್ಯ ವಿಮೆ ಹಾಗೂ ಪರಿಕರಗಳನ್ನು ನೀಡಲಾಗುತ್ತಿದೆ. ಮಾಸ್ಟರ ಆರೋಗ್ಯ ತಪಾಸಣೆ ಮಾಡಿಸಲಾಗುತ್ತದೆ. ಹಾಗೂ ಗೃಹಭಾಗ್ಯ ಯೋಜನೆಯ ಸೌಲಭ್ಯ ನೀಡಲಾಗುತ್ತಿದೆ. ಮತ್ತು ಸೋಲಾರ ವಿದ್ಯುತ್ ಸೌಲಭ್ಯ ನೀಡಲಾಗಿದೆ. ಪ್ರಸೂತಿ ರಜೆ ನೀಡಲಾಗುತ್ತಿದೆ. ಖಾಯಂ ನೌಕರರಿಗೆ 21 ದಿನಗಳ ವಿಶೇಷ ವೇತನ ಸೌಲಭ್ಯ ಒದಗಿಸಲಾಗಿದೆ. ಪೌರ ಕಾರ್ಮಿಕರ ದಿನಾಚರಣೆ ನಿಮಿತ್ಯ ಖಾಯಂ ಪೌರ ಕಾರ್ಮಿಕರಿಗೆ ರೂ 7000/- ಪ್ರೋತ್ಸಹಧನಗಳನ್ನು ನೀಡಲಾಗಿದೆ.<br>ಪೌರಕಾರ್ಮಿಕರ ಅವಲಂಭಿತ ಕುಟುಂಬದವರ್ಗದವರಿಗೆ ವೈದ್ಯಕೀಯ ತಪಾಸಣೆ ಮಾಡಿಸಲಾಗಿದೆ. | 64 | 1078 | ಅಂತಹ ಪ್ರಕರಣಗಳು ಇರುವುದಿಲ್ಲ | ಅನ್ವಯಿಸುವುದಿಲ್ಲ |
| | ಒಟ್ಟು | 0 | 64 | 1078 | 0 | 0 |

| ಕ್ರ. ಸಂ | ಮಹಾನಗರ ಪಾಲಿಕೆ ಹೆಸರು | ಮಹಿಳಾ ಪೌರಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ | ಕಸ ವಿಲೇವಾರಿಗೆ ಎಷ್ಟು ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. | ಗುತ್ತಿಗೆ ಸಂಸ್ಥೆಯಡಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು | ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ ಪಡೆಯುತ್ತಿರುವುದು ಸಂಬಂಧಿಸಿದ ನ.ಸ್ಥ.ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗಳ ಗಮನಕ್ಕೆ ಬಂದಿದೆಯೇ | ಬಂದಿದಲ್ಲಿ ಅಂತಹ ಸಂಸ್ಥೆಗಳನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ |
|---|---|---|---|---|---|---|
| 7 | ಬೆಳಗಾವಿ | ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ. ವಿದೇಶ ಪ್ರವಾಸದೊಂದಿಗೆ ತರಬೇತಿ ಸೌಲಭ್ಯ. 21 ದಿನಗಳ ವಿಶೇಷ ವೇತನ ಸೌಲಭ್ಯ ಗೃಹ ಭಾಗ್ಯ ಯೋಜನೆಯಡಿ ವಸತಿ ಗೃಹ ಸೌಲಭ್ಯ. ಹಾಗೂ ನೇರಸಂಭಾವನೆ ಪೌರಕಾರ್ಮಿಕರಿಗೆ & ಹೊರಗುತ್ತಿಗೆ ಸ್ವಚ್ಛತಾ ಕಾರ್ಮಿಕರಿಗೆ ಇ.ಎಸ್.ಐ.. ಪಿಎಫ್. ಜೀವನ ವಿಮೆ ಸೌಲಭ್ಯ. ಉಪಹಾರ ಭತ್ತೆ. ಒದಗಿಸಲಾಗುತ್ತಿದೆ. ಹಾಗೂ ಶೇ.24.10 ಯೋಜನೆಯಲ್ಲಿ ಪೌರಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸ್‌ಕ್ಕಾಗಿ ಸ್ಕಾಲರ್ ಶಿಪ್. ಲ್ಯಾಪ್‌ಟಾಪ್. ಆರೋಗ್ಯ ನಿರೀಕ್ಷಕರ ತರಬೇತಿಯ ಸೌಲಭ್ಯ ನೀಡಲಾಗುತ್ತಿದೆ. | 9 | 551 | ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾ ಗುತ್ತಿಗೆದಾರರು ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ಲು ಪಡೆಯುತ್ತಿರುವ ಬಗ್ಗೆ ಪಾಲಿಕೆಯ ಗಮನಕ್ಕೆ ಬಂದಿರುವುದಿಲ್ಲ. ಆದರೆ ೫೫೧ ಹೊರಗುತ್ತಿಗೆ ಸ್ವಚ್ಛತಾ ಕಾರ್ಮಿಕರಿಗೆ (ಲೋಡರ್ಸ್. ಕ್ಲೀನರ್ಸ್. ಮೇಲ್ವಿಚಾರಕರು ಇತ್ಯಾದಿ) ಗುತ್ತಿಗೆದಾರರು ಕನಿಷ್ಟ ವೇತನವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿ. ಜಮಾ ಮಾಡಿದ ಕಾರ್ಮಿಕರ ಬ್ಯಾಂಕ್ ಖಾತೆ. ಇ.ಎಸ್.ಐ. ಹಾಗೂ ಪಿ.ಎಫ್. ವಿವರಗಳನ್ನು ಪಾಲಿಕೆಗೆ ಸಲ್ಲಿಸಿದ ನಂತರ ಸದರಿ ದಾಖಲೆಗಳನ್ನು ಖಾತರಿಪಡಿಸಿಕೊಂಡು ಗುತ್ತಿಗೆದಾರರಿಗೆ ಮೊತ್ತವನ್ನು ಪಾವತಿಸುವ ಕ್ರಮ ಕೈಗೊಳ್ಳಲಾಗುತ್ತಿದೆ. | ಅನ್ವಯಿಸುವುದಿಲ್ಲ |
| | ಒಟ್ಟು | 0 | 9 | 551 | | |

| ಕ್ರ. ಸಂ | ಮಹಾನಗರ ಪಾಲಿಕೆ ಹೆಸರು | ಮಹಿಳಾ ಪೌರಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ | ಕಸ ವಿಲೇವಾರಿಗೆ ಎಷ್ಟು ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. | ಗುತ್ತಿಗೆ ಸಂಸ್ಥೆಯಡಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು | ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ ಪಡೆಯುತ್ತಿರುವುದು ಸಂಬಂಧಿಸಿದ ನ.ಸ್ಥ.ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗಳ ಗಮನಕ್ಕೆ ಬಂದಿದೆಯೇ | ಬಂದಿದಲ್ಲಿ ಅಂತಹ ಸಂಸ್ಥೆಗಳನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ |
|---|---|---|---|---|---|---|
| 8 | ಶಿವಮೊಗ್ಗ | 1) ಮಹಿಳಾ ಪೌರಕಾರ್ಮಿಕರು ಕೆಲಸ ನಿರ್ವಹಿಸುವ ವಾರ್ಡ್ ಗಳಲ್ಲಿ ಶೌಚಾಲಯ/ವಿಶ್ರಾಂತಿ ಗೃಹಗಳನ್ನು ನಿರ್ಮಿಸಲಾಗಿರುತ್ತದೆ.<br>2) ಸ್ಯಾನಿಟೈಸರ್. ಯೂನಿಫಾರ್ಮ್ ಮಾಸ್ಕ್. ಗ್ಲೌಸ್. ಗಂಬೂಟ್. ಕೋಟ್ ಮತ್ತು ಸ್ವೆಟರ್ ಗಳನ್ನು ವಿತರಣೆ ಮಾಡಲಾಗಿರುತ್ತದೆ.<br>3) ಮಾಸ್ಟರ್ ಹೆಲ್ತ್ ಚೆಕ್ ಅಪ್ ಮತ್ತು ಹೆಪಟೈಟಿಸ್ ಬಿ ಲಸಿಕೆಯನ್ನು ನೀಡಲಾಗಿರುತ್ತದೆ.<br>ಮಾಡಿಸಲಾಗಿರುತ್ತದೆ.<br>4) ಪೌರಕಾರ್ಮಿಕರಿಗೆ PMJJBY & PMSBY ಯಡಿ ಮತ್ತು ಭಾರತೀಯ ಜೀವ ವಿಮೆ ಮಾಡಿಸಲಾಗಿರುತ್ತದೆ. | - | - | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| | ಒಟ್ಟು | | 0 | 0 | | |

| ಕ್ರ. ಸಂ | ಮಹಾನಗರ ಪಾಲಿಕೆ ಹೆಸರು | ಮಹಿಳಾ ಪೌರಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ | ಕಸ ವಿಲೇವಾರಿಗೆ ಎಷ್ಟು ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. | ಗುತ್ತಿಗೆ ಸಂಸ್ಥೆಯಡಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು | ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ ಪಡೆಯುತ್ತಿರುವುದು ಸಂಬಂಧಿಸಿದ ನ.ಸ್ಥ.ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗಳ ಗಮನಕ್ಕೆ ಬಂದಿದೆಯೇ | ಬಂದಿದಲ್ಲಿ ಅಂತಹ ಸಂಸ್ಥೆಗಳನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ |
|---|---|---|---|---|---|---|
| 9 | ಕಲಬುರಗಿ | ಮಹಹಿಳಾ ಪೌರ ಕಾರ್ಮಿಕರಿಗೆ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಲಾಗುತ್ತಿದೆ.<br>ಸುರಕ್ಷಾ ಪರಿಕರಗಳನ್ನು ನೀಡಲಾಗಿದೆ. ಇದರೊಂದಿಗೆ 24.10<br>ಅಡಿಯಲ್ಲಿ ಸಣ್ಣ ಉದ್ದಿಮೆ ಸಾಲ ಗೃಹಭಾಗ್ಯ ಯೋಜನೆಯಡಿ ಮನೆಗಳನ್ನು ಹಂಚಿಕೆ.<br>ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಾಯಧನ. ಲ್ಯಾಪಟಾಪ್ ವಿತರಣೆ ಹಾಗೂ ಮನೆ ನಿರ್ಮಾಣಕ್ಕಾಗಿ ಸಾಲ ಮತ್ತಿತರ ಸೌಲಭ್ಯಗಳನ್ನು ನೀಡಲಾಗುತ್ತಿದೆ. | 4 | 1539 | ಯಾವುದೇ ಗುತ್ತಿಗೆದಾರರು ಪೌರಕಾರ್ಮಿಕರ ಹೆಸರಿನಲ್ಲಿ ನಕಲಿ ಬಿಲ್ಲು ಪಡೆದಿರುವುದಿಲ್ಲ ಹಾಗೂ ನಕಲಿ ಪೌರ ಕಾರ್ಮಿಕರು ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. | ಅನ್ವಯಿಸುವುದಿಲ್ಲ |
| | ಒಟ್ಟು | | 4 | 1539 | | |
| 10 | ಮೈಸೂರು | 1. ವಿಶ್ರಾಂತಿಗೃಹ ವ್ಯವಸ್ಥೆ ನೀಡಲಾಗುತ್ತಿದೆ.<br>2. ವೈದ್ಯಕೀಯ ತಪಾಸಣೆ ಮಾಡಿಸಲಾಗುತ್ತಿದೆ.<br>3. ಪೌರಕಾರ್ಮಿಕರ ಅನಾರೋಗ್ಯ ನಿಮಿತ್ತ ಆಸ್ಪತ್ರೆಗೆ ಸೇರಿಕೊಂಡಲ್ಲಿ ಚಿಕಿತ್ಸೆಗೆ 1 ಲಕ್ಷ ರೂ ಮುಂಗಡ ಹಣವನ್ನು ನೀಡಲಾಗುತ್ತಿದೆ.<br>4. ಸಮವಸ್ತ್ರ. ಏಪ್ರಾನ್. ಗಮ್‌ಬೂಟ್ಸ್ ಮತ್ತು ಹ್ಯಾಂಡ್‌ಗ್ಲೌಸ್ ನೀಡಲಾಗುತ್ತಿದೆ.<br>5. ಗೃಹಭಾಗ್ಯ ಯೋಜನೆಯಡಿ ಮನೆ ನಿರ್ಮಿಸಲು ಆರ್ಥಿಕ ಸೌಲಭ್ಯ ನೀಡಲಾಗುತ್ತಿದೆ.<br>6. ನೇರಪಾವತಿ ಪೌರಕಾರ್ಮಿಕರಿಗೆ ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯಗಳನ್ನು ನೀಡಲಾಗುತ್ತದೆ. | ಮೈಸೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಲಾಗುತ್ತಿದೆ ನಗರದ ಸ್ವಚ್ಛತಾ ವ್ಯವಸ್ಥೆಯನ್ನು ಪಾಲಿಕೆ ವತಿಯಿಂದಲೇ ನಿರ್ವಹಿಸಲಾಗುತ್ತಿದೆ. | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| | ಒಟ್ಟು | 0 | 0 | 0 | | |
| | ಒಟ್ಟು | 0 | 81 | 4387 | | |

Executive Engineer
Directorate of Municipal Administration
Bangalore.